ಕರ್ನಾಟಕ ಸರ್ಕಾರ

ನಿರ್ದೇಶಕರ ಕಛೇರಿ, ಪದವಿ ಪೂರ್ವ ಶಿಕ್ಷಣ ಇಲಾಖೆ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು

ಸಂಖ್ಯೆ: ಪಪೂಶಿಇ/ಶೈ.ಶಾ.04/ದಾ.ವೇ.02/ದಾ.ವೇ.ಶೈ.ಚ./2018-19 ದಿನಾಂಕ:11-05-2019

# ಸುತ್ತೋಲೆ

ವಿಷಯ: 2019-20ನೇ ಶೈಕ್ಷಣಿಕ ಸಾಲಿಗೆ ಸಂಬಂಧಿಸಿದಂತೆ, ಪ್ರಥಮ/ದ್ವಿತೀಯ ಪಿಯುಸಿ ದಾಖಲಾತಿ ದಿನಾಂಕಗಳನ್ನು ವಿಸ್ತರಿಸಿರುವ ಬಗ್ಗೆ.

ಉಲ್ಲೇಖ: 1. ಸರ್ಕಾರದಿಂದ ಅನುಮೋದಿಸಲ್ಪಟ್ಟ ಏಕ ಕಡತದ ಸಂಖ್ಯೆ: ಪಪೂಶಿಇ/ಶೈ.ಶಾ.04/ದಾ.ವೇ.ಶೈ.ಚ./2017-18

2. 2019-20ನೇ ಸಾಲಿನ ಮಾರ್ಗಸೂಚಿಗಳು

3. ಈ ಕಚೇರಿಯ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ: 30-04-2019

***

ಮೇಲಿನ ವಿಷಯ ಹಾಗೂ ಉಲ್ಲೇಖಕ್ಕೆ ಸಂಬಂಧಿಸಿದಂತೆ, 2019-20ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರಥಮ/ದ್ವಿತೀಯ ಪಿಯುಸಿ ತರಗತಿ ದಾಖಲಾತಿ ದಿನಾಂಕವನ್ನು ಈ ಕೆಳಕಂಡಂತೆ ವಿಸ್ತರಿಸಿ ಆದೇಶಿಸಿದೆ.

| ತರಗತಿ | ದಂಡ ಶುಲ್ಕವಿಲ್ಲದೆ ದಾಖಲಾತಿ ಕೊನೆಯ ದಿನಾಂಕ (ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು). | ವಿಳಂಬ ದಾಖಲಾತಿ ರೂ. 670/- (ರೂ.ಆರು ನೂರ ಎಪ್ಪತ್ತು ಮಾತ್ರ) ದಂಡ ಶುಲ್ಕದೊಂದಿಗೆ (ಎರಡೂ ದಿನಗಳು ಸೇರಿ) (ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು). | ವಿಶೇಷ ದಂಡ ಶುಲ್ಕ ರೂ.2890/-(ರೂ 2220/- ಎರಡು ಸಾವಿರದ ಎರಡು ನೂರ ಇಪ್ಪತ್ತು + ರೂ. 670/-ಆರು ನೂರ ಎಪ್ಪತ್ತು ಮಾತ್ರ) ಎರಡೂ ದಿನಗಳು ಸೇರಿ(ಖಜಾನೆಗೆ ಶುಲ್ಕವನ್ನು ಮಾರನೇ ಕಾರ್ಯನಿರತ ದಿನಾಂಕದಂದು ಕಡ್ಡಾಯವಾಗಿ ಪಾವತಿಸುವುದು) |
|---|---|---|---|
| ಪ್ರಥಮ ಪಿಯುಸಿ | 12-06-2019 | 13-06-2019 ರಿಂದ 24-06-2019ರವರೆಗೆ | 25-06-2019 ರಿಂದ 05-07-2019 ರವರೆಗೆ |
| ದ್ವಿತೀಯ ಪಿಯುಸಿ | | | |

ಸರ್ಕಾರ/ಇಲಾಖೆಗೆ ವಿವಿಧ ಹಂತದಲ್ಲಿ ದಾಖಲಾತಿ ಶುಲ್ಕಗಳನ್ನು ಜಮಾ ಮಾಡಲು ನಿಗಧಿಪಡಿಸಿರುವ ದಾಖಲಾತಿ ದಿನಾಂಕದ ಮಾರನೇ ಕಾರ್ಯನಿರತ ದಿನಾಂಕದಂದು (ದಂಡ ಶುಲ್ಕವಿಲ್ಲದೆ, ದಂಡ ಶುಲ್ಕ ಹಾಗೂ ವಿಶೇಷ ದಂಡ ಶುಲ್ಕ) ಖಜಾನೆಗೆ ಶುಲ್ಕಗಳನ್ನು ಕಡ್ಡಾಯವಾಗಿ ಜಮೆ ಮಾಡುವುದು ಪ್ರಾಂಶುಪಾಲರ/ಆಡಳಿತ ಮಂಡಳಿಯವರ ಪೂರ್ಣ ಜವಬ್ದಾರಿಯಾಗಿರುತ್ತದೆ.

(ಮಾನ್ಯ ನಿರ್ದೇಶಕರ ಆದೇಶದ ಮೇರೆಗೆ)

ಜಂಟಿ ನಿರ್ದೇಶಕರು (ಶೈಕ್ಷಣಿಕ)
ಪದವಿ ಪೂರ್ವ ಶಿಕ್ಷಣ ಇಲಾಖೆ.

ಪ್ರತಿಗಳನ್ನು:

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಇವರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ - ತಮ್ಮ ಜಿಲ್ಲಾ ವ್ಯಾಪ್ತಿಗೆ ಒಳಪಡುವ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ ಗಮನಕ್ಕೆ ತರಲು ಸೂಚಿಸಿದೆ.
2. ರಾಜ್ಯದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರುಗಳಿಗೆ, ಸಂಬಂಧಿಸಿದ ಜಿಲ್ಲಾ ಉಪನಿರ್ದೇಶಕರುಗಳ ಮೂಲಕ.
3. ಮಾನ್ಯ ನಿರ್ದೇಶಕರ ಆಪ್ತ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಮಾಹಿತಿಗಾಗಿ